ಎಸ್.ಜಿ.ರಾಜಶೇಖರರೆಡ್ಡಿ,ಗೌರಿಬಿದನೂರು
ಎಲೆಕ್ಷನ್‌ನ ಹೆಂಡ ಕುಡಿದು, ಅವರು ಕೊಟ್ಟ ನೋಟಿಗೆ ಬಿರಿಯಾನಿ ತಿಂದು ನಿಮ್ಮನ್ನು ಏನೆಂದು ಪ್ರಶ್ನಿಸಲಿ?



ತೂರಾಡುತ್ತಾ, ಬಂದು ಮುಂದಿನ ಎಲೆಕ್ಷನ್ ಎಂದು? ಎಂದು!

ಕುಬೇರಪ್ಪ ಎಂ. ವಿಭೂತಿ, ಹರಿಹರ
ಬುದ್ಧಿ ಜೀವಿಗಳು ಸಲಹೆ ಕೊಡುವುದರ ಬದಲು ಸಮಾಜ ಸುಧಾರಣೆಗೆ ಮುಂದೆ ಬರುವುದಿಲ್ಲವಲ್ಲ, ಏಕೆ?
ಬುದ್ಧಿಜೀವಿಗಳು ಮುಂದೆ ಹೇಗೆ ಬಂದಾರು? ಅವರವರ ಆಲೋಚನೆಯ ಕೊಳದಲ್ಲಿ ಕೊಳೆಯುವವರೇ ಬುದ್ಧಿಜೀವಿಗಳು!

ಕೇಶವ ಎನ್ ಪೈ, ಕಾಸರಗೋಡ
ಜಗದ ಜಲವೆಲ್ಲ ಬತ್ತಿ ಬರಿದಾದರೆ?
ಚಿಂತೆ ಇಲ್ಲ. ನಮ್ಮ ಟಿವಿ ಸೀರಿಯಲ್ ನಿರ್ಮಾಪಕರು ಹೆಣ್ಣಿನ ಕಣ್ಣೀರಿನ ಸುನಾಮಿಯನ್ನೇ ಹರಿಸಿ ಬರಿದಾದುದನ್ನೆಲ್ಲಾ ತುಂಬಿಸುವರು.

ಜೆ.ಪ್ರದೀಪ್ ಕುಮಾರ್, ಹೂವಿನಹಡಗಲಿ
ನಿಜವಾದ ಪುರೋಹಿತರ ಸಮ್ಮುಖದಲ್ಲಿ ನಡೆಯುವ ಮದುವೆಗೂ, ಪೊಲೀಸರ ಪೌರೋಹಿತ್ಯದಲ್ಲಿ ನಡೆಯುವ ಮದುವೆಗೂ ಏನು ವ್ಯತ್ಯಾಸ?
ಸಂಸ್ಕೃತಿ ಅದೇ ಇದ್ದರೂ ಸಂಸ್ಕೃತ ಬೇರೆಯದಿರುತ್ತದೆ!

ಬಸವರಾಜ ಹೊನಖಾಂಡೆ, ಅಥಣಿ
ಮದುವೆ ಮಂಟಪಗಳಲ್ಲಿ ಬ್ರಹ್ಮಚಾರಿಗಳಿಗೇನು ಕೆಲಸ?
ತಮ್ಮ ಬ್ರಹ್ಮಚರ್ಯಕ್ಕೆ ಇತಿಶ್ರೀ ಹಾಡಿ ಕೈಹಿಡಿವಳ ಹುಡುಕಾಟ!

ಎಂ.ಬಿ.ಖೋದಾನಪುರ, ಸವದತ್ತಿ
ಪ್ರೇಮಿಸುವಾಗ ಪಾಲಕರನ್ನು ಕೇಳದವರು ಮದುವೆಯಾಗುವಾಗ ಏಕೆ ಕೇಳುತ್ತಾರೆ?
ಪ್ರೇಮಕ್ಕೆ ಆಶೀರ್ವಾದದ ಅಗತ್ಯವಿಲ್ಲವಲ್ಲ!

ಬಿ.ಪಿ.ವೆಂಕಟೇಶ್, ಬೋಧನಹೊಸಹಳ್ಳಿ
ಆಷಾಢಮಾಸದಲ್ಲಿ ಅತ್ತೆಸೊಸೆಯರೇಕೆ ದೂರ ದೂರ?
ದೂರು ದೂರುವುದಕ್ಕೆ ಬ್ರೇಕ್ ಇರಲೆಂದು!

## ಬಹುಮಾನಿತ ಪ್ರಶ್ನೆ

ಸವಿರವಿ, ಚಿಕ್ಕಮಗಳೂರು
ಈ ವ್ಯಕ್ತಿಗೆ ವಯಸ್ಸಾಗಿದೆ, ತಾನು ಬೆಳ್ಳಗಾಗಬೇಕು ಎಂದು ಕೂದಲಿಗೆ ಹೇಗೆ ಗೊತ್ತಾಗುತ್ತದೆ?
ಕೂದಲಿನ ಕಿವಿಗೆ ಹದಿಹರೆಯದವರು ಸರ್/ಮಿಸ್ ಎಂದು ಕರೆಯುವ ಬದಲು ಅಂಕಲ್/ಆಂಟಿ ಎಂದು ಕರೆಯುವುದು ಬಿದ್ದಾಗ ಅದು ಬೆಳ್ಳಗಾಗಲು ತೊಡಗುತ್ತದೆ!

ಪ್ರಿಂಟ್ ಶೇಖರಿ, ಗೌರಿಬಿದನೂರು
ರಾವಣನಿಗೆ ತಲೆನೋವು ಬಂದಾಗ ಯಾವ ತಲೆಯದ್ದು ಎಂದು ಹೇಗೆ ತಿಳಿದುಕೊಳ್ಳುತ್ತಿದ್ದ?
ಸತಿಗಿಂತಲೂ ತಲೆಶೂಲೆಯುಂಟೆ ಜಗದೊಳು? ಮಂಡೋದರಿ ಯಾವ ಮುಖದ ಮುಂದೆ ನಿಂತಿರುತ್ತಿದ್ದಳೋ ಅದೇ ತಲೆಯ ನೋವೆಂದು ತೀರ್ಮಾನಿಸುತ್ತಿದ್ದ!

ಎಂ.ಎಸ್.ಗುರುರಾಜಾಚಾರು, ಬಳ್ಳಾರಿ
ಕಾಂಗ್ರೆಸ್ ಸರ್ಕಾರ ಗಾಳಿಯಲ್ಲಿ ಮನೆ ಕಟ್ಟುತ್ತಾರಂತೆ. ಬಿ.ಜೆ.ಪಿ?
ಆ ಮನೆಯ ಮುಂದೆ ಒಂದು ಕೊಳ ನಿರ್ಮಿಸಿ ಕಮಲ ಅರಳಿಸುವರಂತೆ!

ಎ.ಕೆ.ಪಟ್ಟಾಭಿ, ಬೆಂಗಳೂರು
ರಾಜಕಾರಣಿಗಳು ಸತ್ತಾಗ ಅವರನ್ನು ಸುಡಲು ಗಂಧದ ಮರದ ತುಂಡುಗಳನ್ನೇಕೆ ಬಳಸುತ್ತಾರೆ?
ಸತ್ತರೂ ಹೋಗದ ದುರ್ವಾಸನೆ ದೂರವಾಗಿಸಲೆಂದು!

ಸೊಂ.ನಾ.ಶ್ರೀಧರಮೂರ್ತಿ, ದಾವಣಗೆರೆ
ನನಗೆ ನನ್ನ ಅಜ್ಜಿ ಇಂದಿರಾಜೀಯೇ ಆದರ್ಶ ಎಂದು ಪ್ರಿಯಾಂಕ ಹೇಳಿದ್ದಾರಲ್ಲಾ, ಯಾವುದರಲ್ಲಿ?



ಕನ್ನಡಿಯಲ್ಲಿ ಉದ್ದನೆಯ ಮೂಗನ್ನು ನೋಡಿಕೊಳ್ಳುವುದರಲ್ಲಿ!

ಎಂ.ಎನ್.ಸೋಮಶೇಖರ್, ಮೈಸೂರು
ಅತೀ ಕುಳ್ಳರು ಅತೀ ಉದ್ದವಿರುವ ಯುವತಿಯರನ್ನು ವಿವಾಹವಾಗುತ್ತಿರುವ ಕಾರಣವೇನು?



ಹೆಣ್ಣನ್ನು ತಲೆ ಎತ್ತಿ ನೋಡಬೇಕೆಂಬ ಅಭಿಲಾಷೆಯಿಂತೆ!

ಡಿ.ಎಸ್.ಪಂಕಜಸುಬ್ರಮಣ್ಯಂ, ಬೆಂಗಳೂರು
ನಿಂತಾಗ ಯೋಚನೆ, ಕೂತಾಗ ಯೋಚನೆ. ಇದಕ್ಕೆ ಪರಿಹಾರವೇನು?
ಸದನಕ್ಕೆ ಹೋಗಿ ಮಲಗಿಬಿಟ್ಟರಾಯ್ತು!

ಎಸ್.ನರಹರಿ, ಬೆಂಗಳೂರು
ರಾಮಾಯಣ, ಮಹಾಭಾರತ ಕಥೆಗಳು ನಿಜವಾಗಿ ನಡೆದಿದ್ದವೇ?
ನಡೆದಿದ್ದವಲ್ಲ! ಎನ್ ಟಿ ಆರ್ ಅಭಿನಯದಲ್ಲಿ ನೂರಾರು ದಿನಗಳು ಹೌಸ್‌ಫುಲ್ ಆಗಿ ನಡೆದಿದ್ದವು!

ಜೆ.ಆರ್.ಆದಿನಾರಾಯಣಮುನಿ, ಆದಿವಾಲ
ಜಗತ್ತಿನಲ್ಲಿ ದುಃಖ-ದುಮ್ಮಾನಗಳೇ ಇಲ್ಲದಿದ್ದರೆ...?
ಟಿ.ವಿ. ಸೀರಿಯಲ್‌ಗೆ ಕಥೆಗಳೇ ಸಿಗುತ್ತಿರಲಿಲ್ಲ!

ಜೆ.ಸುಬ್ಬನಾಯಕ, ಬೊಮ್ಮಲಾಪುರ
ದೇವರು ಮಾನವನಿಗೆ ಭವಿಷ್ಯವನ್ನು ರಹಸ್ಯವಾಗಿಟ್ಟಿರಲು ಕಾರಣವೇನು?
ಟಿವಿಯಲ್ಲಿ ಠೀವಿಯಿಂದ ಭವಿಷ್ಯ ನುಡಿಯುವವರ ಹಣೆಬರಹ ಚೆನ್ನಾಗಿರಲೆಂದು!

ಎಚ್.ಆರ್.ದೇಸಾಯಿ, ರಾಯಚೂರು
ಎಲ್ಲರೂ ಗಣಿಧಣಿ, ಹಣಧಣಿಗಳಾಗಬಯಸುತ್ತಿದ್ದಾರೆ. ಜ್ಞಾನಧಣಿಗಳಾಗಲು ಏಕೆ ಬಯಸುತ್ತಿಲ್ಲ?
ಏಕೆಂದರೆ ಇವರಿಗೆ ಜೀವನದಲ್ಲಿ wise ಆಗುವುದಕ್ಕಿಂತಲೂ rise ಆಗುವುದು ಮುಖ್ಯ!

ಮಲ್ಲಿಕಾರ್ಜುನ ಗಚ್ಚಿ, ಗೋಗಿ
ಚುನಾವಣೆ ಸಮಯದಲ್ಲಿರುವ ಮತದಾರಪ್ರಭುವಿನ ಮನ್ನಣೆ ಚುನಾವಣೆಯ ನಂತರ ಇರುವುದಿಲ್ಲವಲ್ಲ?
ಜುಟ್ಟು ಕೆದರಿದಾಗ ಬಾಚಣಿಗೆ, ಓಟು ಪಡೆಯುವಾಗ ಮತದಾರ; ನಂತರ ಎರಡೂ ತೆರೆಯ ಮರೆಗೇ!

■ ರಾಮ್